DAA/DCA/DSA – 010

ಪ್ರಥಮ ಬಿ.ಎ/ಬಿ.ಕಾಂ./ಬಿ.ಎಸ್ಸಿ., ಪದವಿ ಪರೀಕ್ಷೆ ಸೆಪ್ಟಂಬರ್/ಅಕ್ಟೋಬರ್, 2012

ಅಂಚೆ ಮತ್ತು ತೆರಪಿನ ಶಿಕ್ಷಣ

ಕನ್ನಡ ಭಾಷಾ ಪತ್ರಿಕೆ – ೧

# ಹೊಸಗನ್ನಡ ಕವಿತೆಗಳು, ಶೂದ್ರತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ

ಸಮಯ : 3 ಗಂಟೆಗಳು ಅಂಕಗಳು : 70/80

1. ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. **4**

೧) ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು ಹಕ್ಕಿಗಳಾ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು–ಕಾಡಿನಾ ನಾಡು

೨) ಶಿವ ಶಿವ ಶಿವ !
ಅಂತಪ್ಪ ಘೋರಮಂನಾವೆಸಿಗಿದೆವಲ್ತು
ಅರಿಯದಾಕುವರಂ ಕೈಮುಗಿಯಲಿರ್ದನ್
ಮಾಣ್ ಒಱೂದ್ರರಿಗೆ ತುಳಿಲ್‌ಗೆಯ್ಯಲಾಗ !
ಎಂದಾಂ ಬುದ್ಧಿಯಂ ತಿದ್ದಿತಡೆದೆನ್

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ : **4**

ತೆಂಕಣ, ಬಾಂದೆಳ, ಒಲುಮೆ, ತರು, ಬಿಜ್ಜೆ, ನೇಸರ, ಚೊಟ್ಟು, ಪಾರ್ವ, ವಟತರು, ಲಾಂದ್ರ, ಅಂಬುಧಿ, ಕೂರ್ಮ

ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **4**

ವೃಕ್ಷ ಭೈರವ, ಪುಷ್ಪಕವಿಮಾನ, ಜಿ. ಎಸ್. ಶಿವರುದ್ರಪ್ಪ

2. ನಾಲ್ಕು ಪ್ರಶ್ನೆಗಳಿಗೆ ಸೂಚಿಸಿ ಟಿಪ್ಪಣಿ ಬರೆಯಿರಿ : **(4×3=12)**

೧) ಕಂಡಿತು ಕಣ್ಣು ಸವಿದಿತು ನಾಲಗೆ
೨) ಹಗಲು ಸತತೋದ್ಯೋಗಿ ಇರುಳ ಕಿಂದರ ಜೋಗಿ
೩) ಬೆಳಗಿಂದ ಸಂಜೆಯತನಕ ಲಕ್ಷ ಚಕ್ರದ ಉರುಳು
೪) ಅನಾಥ ರಕ್ಷಣಾ, ದುಃಖವಿಮೋಚಣ
೫) ಪೆಸರಿಪುದೇನಾ ಬನಕೆ ? ಇರ್ಪುದೆತ್ತಣೆ ?
೬) ಅಧರ್ಮಸಂಹಾರಮೆ ಮೃತ್ಯುವಿಜಯಂ

P.T.O.

3. ''ಮದಲಿಂಗನ ಕಣಿವೆ'' ಎಂದು ಹೆಸರು ಬರಲು ಕಾರಣವಾದ ವೃತ್ತಾಂತವನ್ನು ಮಾಸ್ತಿ ಮನೋಜ್ಞವಾಗಿ ಚಿತ್ರಿಸಿದ ಬಗೆಯನ್ನು ವಿವರಿಸಿ. 8

ಅಥವಾ

ಜನಪ್ರತಿನಿಧಿಗಳ ಜನವಿರೋಧಿತನ ''ಕುರಿಗಳು ಸಾರ್ ಕುರಿಗಳು'' ಕವನದಲ್ಲಿ ಮೂಡಿಬಂದ ಬಗೆಯನ್ನು ವಿವರಸಿ.

4. 'ಶೂದ್ರತಪಸ್ವಿ ಶ್ರೀರಾಮ ವಿವೇಕ, ತಾಳ್ಮೆಯ ಪ್ರತೀಕ' ಈ ಹೇಳಿಕೆಯನ್ನು ಚರ್ಚಿಸಿ. 8

ಅಥವಾ

'ಶೂದ್ರನ' ತಪಸ್ವಿಗೂ 'ಬ್ರಾಹ್ಮಣ' ಕುಮಾರನ ಸಾವಿಗೂ ಯಾವ ಬಗೆಯ ಸಂಬಂಧವಿದೆ ವಿವರಿಸಿ.

5. 1) ಗೋಪಾಲಯ್ಯನವರ ಜೀವನೋತ್ಸಾಹವನ್ನು ವಿವರಿಸಿ. 10

ಅಥವಾ

ಗೋಪಾಲಯ್ಯನವರ ಪ್ರಭಾವವು ನಾರಾಯಣ ಮತ್ತು ಬದುಕಿನ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ?

2) ಶಿವರಾಮಯ್ಯ, ದೇರಣ್ಣ, ಬಟ್ಯ ಪಾತ್ರಗಳಲ್ಲಿ ಎರಡು ಪಾತ್ರಗಳನ್ನು ಪರಿಚಯಿಸಿ. 10

ಅಥವಾ

ಗೋಪಾಲಯ್ಯ ಮತ್ತು ಶಂಕರಮ್ಮನ ದಾಂಪತ್ಯ ಜೀವನದ ಸೊಗಸನ್ನು ವಿವರಿಸಿ.

6. ಅ) 'ಅರೆ ಸರ್ಕಾರಿ ಪತ್ರ' ಎಂದರೇನು ? 2

ಆ) 'ಜ್ಞಾಪನ ಪತ್ರ' ಎಂದರೇನು ? ಮಾದರಿ ಪತ್ರವೊಂದನ್ನು ರಚಿಸಿ. 4

ಇ) ಜಾಹಿರಾತು ಮತ್ತು ಪ್ರಕಟಣೆಯ ಉದ್ದೇಶಗಳೇನು ? ತಿಳಿಸಿ. 4

7. ಯಾವುದಾರೂ ಒಂದು ಪ್ರಶ್ನೆಗೆ ಉತ್ತರಿಸಿ (80 ಅಂಕಗಳ ಸ್ಕೀಮ್‌ನವರಿಗಾಗಿ ಕಡ್ಡಾಯ ಪ್ರಶ್ನೆ) 10

1) ಸುತ್ತೋಲೆ ಎಂದರೇನು ? ಸುತ್ತೋಲೆಯ ಮಾದರಿಯೊಂದನ್ನು ರಚಿಸಿ.

ಅಥವಾ

2) ಸರ್ಕಾರಿ ಪತ್ರದ ವಿವಿಧ ಅಂಶಗಳನ್ನು ಕುರಿತು ಬರೆಯಿರಿ.